ದಲಿತರ ರಕ್ತಸಿಕ್ತ ಕಗ್ಗೊಲೆಯ ನೋವು ಮಾಸುತ್ತಿರುವ, ಗಾಂಧಿ ಮೆಟ್ಟಿದ ಬದನವಾಳಿನ ನೆಲದಲ್ಲಿ ಸುಸ್ಥಿರ ಬದುಕು ಕಟ್ಟುವ ಪ್ರಯತ್ನ ನಡೆಯುತ್ತಿದೆ. ಇಂದಿನ ಅತ್ಯಾಧುನಿಕ ಮತ್ತು ಖಾಸಗೀಕರಣದ ನಡುವೆ ಹತ್ತಿರತ್ತಿರ ಶತಮಾನಗಳವರೆಗೆ ಖಾದಿ ಉದ್ಯಮ ಉಳಿಸಿಕೊಂಡಿರುವ ಈ ನೆಲದಲ್ಲಿ ಹಿರಿಯ ರಂಗಕರ್ಮಿ ಪ್ರಸನ್ನ ಅವರು ಬದನವಾಳು ಸತ್ಯಾಗ್ರಹ ಮತ್ತು ಸುಸ್ಥಿರ ಬದುಕಿನ ರಾಷ್ಟ್ರೀಯ ಸಮಾವೇಶ ಆಯೋಜಿಸಿದ್ದಾರೆ. ಸುಸ್ಥಿರತೆಯ ಕುರಿತಾದ ಅಪಾರ ಕಳಕಳಿಯುಳ್ಳ ಆ ಹಿರಿಯ ಜೀವಿಯೊಂದಿಗೆ ಕನ್ನಡಪ್ರಭ ನಡೆಸಿದ ಸಂದರ್ಶನದ ಪೂರ್ಣ ಪಾಠ ಇಲ್ಲಿದೆ.




ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು. ಸುಸ್ಥಿರ ಬದುಕಿನ ಹಣತೆಯ ಕುಡಿ ಈ ಬದನವಾಳು.





# ಅನ್ನ ಉಣ್ಣುವ ಎಲ್ಲರೂ ರೈತರ ಬಗ್ಗೆ ಚಿಂತಿಸಬೇಕು






ಪ್ರಸನ್ನ ಸಂದರ್ಶನ

ಡಿ.ಎನ್. ಮಹೇಂದ್ರ
devanur.mahendra@gmail.com

## ಸುಸ್ಥಿರ ಬದುಕಿನ ಕುರಿತಾದ ಹೋರಾಟಕ್ಕೆ ಬದನವಾಳಿನ ಆಯ್ಕೆ ಏಕೆ?

ಗಜೇಂದ್ರಗಡದಲ್ಲಿ ನೇಕಾರರ ಪರವಾದ ಗಟ್ಟಿನಿಲುವಿನ ಹೋರಾಟ ಈ ಸುಸ್ಥಿರ ಬದುಕಿನ ಸಮಾವೇಶಕ್ಕೆ ಪ್ರೇರಣೆ ನೀಡಿದೆ. ಅಲ್ಲಿನ ಹೋರಾಟದ ಮುಂದುವರಿದ ಭಾಗವೆ ಬದನವಾಳು ಸತ್ಯಾಗ್ರಹ ಮತ್ತು ಸಮಾವೇಶ. ಮೊದಲಿಗೆ ಖಾದಿಯ ಜೊತೆ ರೇಷ್ಮೆ ಉತ್ಪನ್ನಗಳ ತಯಾರಿಕೆ, ಬಳಿಕ ಕಾಗದ, ಎಣ್ಣೆಕಾಳು ಉತ್ಪಾದನೆ, ಚಕಮಕಿ ಬೆಂಕಿಕಡ್ಡಿ ತಯಾರಿಕೆಯಲ್ಲಿ ಹೆಸರು ಮಾಡಿದ್ದ ಬದನವಾಳಿನಲ್ಲಿ ಈಗ ಉಳಿದಿರುವುದು ಕೇವಲ ಖಾದಿ ಉತ್ಪನ್ನಗಳ ತಯಾರಿಕೆ ಮಾತ್ರ. ಗಾಂಧಿ ಮೆಟ್ಟಿದ ಈ ನೆಲದಲ್ಲಿ ಖಾದಿ ಉದ್ಯಮ ಉಳಿಯಬೇಕು ಎಂಬುದು ನಮ್ಮ ಆಶಯ. ಅಲ್ಲದೆ ಇದುವರೆಗೆ ಕೇವಲ ಉತ್ತರ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿದ್ದ ನಮ್ಮ ಈ ಹೋರಾಟ ದಕ್ಷಿಣ ಭಾಗಕ್ಕೂ ವಿಸ್ತರಿಸಲು ಮುಂದಾದಾಗ ಬದನವಾಳು ಸೂಕ್ತ ಸ್ಥಳ ಎನಿಸಿತು.

## ಕೈ ಮಗ್ಗದ ಮೂಲಕ ಕಂಡುಕೊಳ್ಳಬೇಕಾದ ಸುಸ್ಥಿರ ಬದುಕಿನ ಮೂಲ ಆಶಯವೇನು?

ಕರ್ನಾಟಕದ ಮಟ್ಟಿಗೆ ನೇಕಾರರ ಸಮಸ್ಯೆಯ ಬಗ್ಗೆ ನಡೆದ ಹೋರಾಟ ದೊಡ್ಡದು. ವಿದ್ಯುತ್ ಯಂತ್ರಗಳ ಕಲಬೆರಕೆಯಿಂದ ಕೈಮಗ್ಗದ ಬೆಲೆ ಕುಸಿದಿದೆ. ಇದರಿಂದಾಗಿ ದೇಶಾದ್ಯಂತ ಲಕ್ಷಾಂತರ ಮಂದಿ ನೇಕಾರರು ನಿರ್ಗತಿಕರಾಗುತ್ತಿದ್ದಾರೆ. ಈಗ ನಾವು ಗ್ರಾಹಕರು ಮತ್ತು ಹಳ್ಳಿಯಲ್ಲಿನ ಉತ್ಪಾದಕರನ್ನು ರಕ್ಷಿಸಬೇಕಿದೆ. ಅನ್ನ ಉಣ್ಣುವ ಎಲ್ಲರೂ ರೈತರ ಬಗ್ಗೆ ಚಿಂತಿಸಬೇಕು, ಬಟ್ಟೆ ತೊಡುವ ಎಲ್ಲರೂ ನೇಕಾರರ ಬಗ್ಗೆ ಚಿಂತಿಸಬೇಕು. ಉದ್ಯೋಗಕ್ಕಾಗಿ ಊರು ಬಿಟ್ಟು ಹೋಗುವ ಅಗತ್ಯವಿಲ್ಲ. ನಾವಿರುವಲ್ಲಿಯೇ ಸುಸ್ಥಿರತೆಯ ಮೂಲಕ ಉದ್ಯೋಗದ ದಾರಿ ಕಂಡುಕೊಳ್ಳಬಹುದು.

## ನಿಮ್ಮ ಸತ್ಯಾಗ್ರಹದ ಮೂಲಕ ಸರ್ಕಾರಕ್ಕೆ ನಿಮ್ಮ ಬೇಡಿಕೆಗಳೇನು?

ಈ ಸತ್ಯಾಗ್ರಹದ ಮೂಲಕ ಸರ್ಕಾರಕ್ಕೆ ಯಾವುದೇ ಬೇಡಿಕೆ ಇಡುತ್ತಿಲ್ಲ. ಏಕೆಂದರೆ ಕೈಮಗ್ಗ ಅಥವಾ ಖಾದಿ ಉದ್ಯಮ ಉಳಿಸುವಲ್ಲಿ ಎಲ್ಲ ಸರ್ಕಾರಗಳು ಸೋತಿವೆ. ಏಕೆಂದರೆ ಎಲ್ಲ ಪಕ್ಷಗಳೂ ನಗರೀಕರಣ ಮತ್ತು ಯಾಂತ್ರೀಕೃತ ಬದುಕಿನತ್ತ ಮುಖಮಾಡಿವೆ. ಆದ್ದರಿಂದ ನಮ್ಮ ಈ ಚಳವಳಿ ನಾಗರಿಕರ ಜೊತೆ. ಅವರ ಬೆಂಬಲ ಪಡೆದು ಯಂತ್ರ ನಾಗರಿಕತೆಯ ಹಿಂದೆ ಓಡುತ್ತಿರುವವರನ್ನು ಸುಸ್ಥಿರ ಬದುಕಿನತ್ತ ಕರೆತರುವ ಪ್ರಯತ್ನವಾಗಿದೆ.

## ಬದನವಾಳಿನ ಜನತೆ ನಿಮಗೆ ನೀಡುತ್ತಿರುವ ಬೆಂಬಲ ಹೇಗಿದೆ?

ನಾವು ಜನರ ಮುಂದೆ ಕರಪತ್ರಗಳನ್ನು ಹಿಡಿದು ಹೋಗುತ್ತಿಲ್ಲ. ಏಕೆಂದರೆ ಜನರು ನಮ್ಮನ್ನೂ ಯಾವುದೋ ಪಕ್ಷದವರು ಎಂದು ತಿಳಿಯುವ ಅಪಾಯವಿದೆ. ಆದ್ದರಿಂದ ಗ್ರಾಮದ ಹೊರ ವಲಯದಲ್ಲಿರುವ ಈ ಖಾದಿ ಗ್ರಾಮೋದ್ಯೋಗದ ಆವರಣದಲ್ಲಿಯೇ ಕಳೆದ ಐದು ದಿನಗಳಿಂದ ಇದ್ದೇವೆ. ಕಸ ಮತ್ತು ಗಿಡಗಂಟಿಗಳಿಂದ ತುಂಬಿದ್ದ ಆವರಣವನ್ನು ನಾವೇ ಸ್ವಚ್ಛಗೊಳಿಸಿದ್ದೇವೆ. ನಮ್ಮ ಈ ನಡೆಯನ್ನು ಗಮನಿಸಿದ ಗ್ರಾಮಸ್ಥರು ನಮ್ಮತ್ತ ಬರುತ್ತಿದ್ದಾರೆ. ನಮ್ಮ ಉದ್ದೇಶಗಳನ್ನು ಕೇಳುತ್ತಿದ್ದಾರೆ. ಸುಸ್ಥಿರ ಬದುಕಿನ ಅರಿವು ಪಡೆದ ಅನೇಕರು ನಮಗೆ ಬೆಂಬಲವಾಗಿ ನಿಂತಿದ್ದಾರೆ. ತಮ್ಮ ಮನೆಗಳಿಗೆ ಕರೆದು ಸತ್ಕರಿಸುತ್ತಿದ್ದಾರೆ. ಈ ಪ್ರಯತ್ನ ಮುಂದುವರೆಯುತ್ತದೆ.

## ಸತ್ಯಾಗ್ರಹ ಮತ್ತು ಸಮಾವೇಶದ ರೂಪುರೇಷೆ ಹೇಗೆ?

ಈ ಸತ್ಯಾಗ್ರಹ ಮತ್ತು ಸಮಾವೇಶದ ಹಿನ್ನೆಲೆಯಲ್ಲಿ ಚಾಮರಾಜನಗರದ ದೀನಬಂಧು ಆಶ್ರಮದಿಂದ ಏ.16ರಂದು ಪಾದಯಾತ್ರೆ ನಡೆಯಲಿದೆ. ಅಲ್ಲದೆ ಏ.12ರಂದು ಎಚ್.ಡಿ. ಕೋಟೆಯ ಕಾರಾಪುರ ಹಾಡಿಯಿಂದ, 15ರಂದು ಮೈಸೂರಿನಿಂದ, 17ರಂದು ಹುಣಸೂರಿನಿಂದ, 19ರಂದು ನಂಜನಗೂಡಿನಿಂದ ವಿವಿಧ ಸಂಘಟನೆಗಳು ಪಾದಯಾತ್ರೆ ಹೊರಡಲಿವೆ. ಇದಕ್ಕೆ ಪೂರಕವಾಗಿ ಬೆಂಗಳೂರಿನಲ್ಲಿ ಸಿಜಿಕೆ ರಾಷ್ಟ್ರೀಯ ನಾಟಕೋತ್ಸವ ನಡೆಯಲಿದೆ. ಸಮಾವೇಶದಲ್ಲಿ ವಿವಿಧ ಉತ್ಪನ್ನಗಳ ಮಾರಾಟ ನಡೆಯಲಿದೆ. ನಾಲ್ಕು ಪಂಚಾಯಿತಿಗಳಲ್ಲಿ ಕೃಷಿ, ವಿಕೇಂದ್ರೀಕರಣ ಆಡಳಿತ, ಪ್ರಜಾಪ್ರಭುತ್ವ ವ್ಯವಸ್ಥೆ ಮುಂತಾದ ವಿಷಯಗಳ ಕುರಿತು ಚರ್ಚೆ ನಡೆಯಲಿದೆ. ಆಸಕ್ತರು ತಮಗಿಷ್ಟ ಬಂದ ಪಂಚಾಯಿತಿಯಲ್ಲಿ ಭಾಗವಹಿಸಬಹುದು.

## ನಿಮಗೆ ಹೊರಗಿನ ಸಂಘಟನೆಗಳಿಂದ ದೊರೆಯುತ್ತಿರುವ ಬೆಂಬಲ ಹೇಗಿದೆ?

ರೈತಸಂಘಟನೆಗಳು, ಪ್ರಗತಿಪರ ಚಿಂತಕರು, ಸಾಹಿತಿಗಳು, ಪಶ್ಚಿಮಘಟ್ಟ ಹೋರಾಟ ಸಮಿತಿ, ಇಕ್ರಾ, ಹುಲಿ ಸಂರಕ್ಷಣಾ ಪಡೆ, ಡೀಡ್, ಚಾಮರಾಜನಗರದ ದೀನಬಂಧು ಸಂಸ್ಥೆ, ಜನಸಂಗ್ರಾಮ ಪರಿಷತ್‌ನ ಎಸ್.ಆರ್. ಹಿರೇಮಠ್, ಲೈಫ್ ಆಫ್ ಪೈ ಖ್ಯಾತಿಯ ಇರ್ಫಾನ್ ಖಾನ್, ಬಹುಭಾಷಾ ನಟ ಪ್ರಕಾಶ್ ರೈ, ಹಾಸ್ಯನಟ ರಂಗಾಯಣ ರಘು ಮುಂತಾದವರು ಈ ಸಮಾವೇಶಕ್ಕೆ ಬೆಂಬಲ ಸೂಚಿಸಿದ್ದಾರೆ.

➡4



ಚಿತ್ರಕೃಪೆ: nammabanavasi.com



## ಪ್ರಸನ್ನ ಸರದರ್ಶನ

**ಸರ್ಕಾರ ಗುಡಿ ಕೈಗಾರಿಕೆ, ಕೈಮಗ್ಗದ ಉದ್ದಿಮೆ ಅಥವಾ ಖಾದಿ ಉದ್ಯಮಕ್ಕೆ ಬೆಂಬಲ ನೀಡುವಂತಾಗಲು ನಿಮ್ಮ ಸಲಹೆ ಏನು?**

ಗುಡಿ ಕೈಗಾರಿಕೆ ಅಥವಾ ಖಾದಿ ಉದ್ಯಮವನ್ನು ನಾಳಿನ ಉದ್ಯಮ ಎಂದು ಗ್ರಹಿಸಬೇಕು. ಆದರೆ ನಮ್ಮ ಸರ್ಕಾರಗಳು ಕೇವಲ ಬಹುರಾಷ್ಟ್ರೀಯ ಕಂಪನಿಗಳನ್ನು ಮಾತ್ರ ನಾಳಿನ ಉದ್ಯಮ ಎಂದು ಗ್ರಹಿಸುತ್ತಿರುವ ಪರಿಣಾಮ ಖಾದಿ ಉದ್ಯಮ ಸೊರಗುತ್ತಿದೆ. ಅಧಿಕಾರಿಗಳ ಮೂಲಕ ಅಥವಾ ಅಂಕಿ ಅಂಶಗಳ ಮೂಲಕ ಈ ಉದ್ಯಮ ಉಳಿಸುತ್ತೇವೆ ಎಂಬುದು ಸುಳ್ಳು. ಅದು ಸ್ಥಳೀಯರ ಪ್ರಯತ್ನದಿಂದ ಮಾತ್ರ ಸಾಧ್ಯ. ಯಂತ್ರಗಳು ತೈಲ ಮುಗಿದ ಮೇಲೆ ನಿಂತು ಹೋಗುತ್ತವೆ. ಆದರೆ ಕೈಮಗ್ಗ ಉದ್ಯಮ ನಿತ್ಯ ನಿರಂತರ.

**ಬದನವಾಳಿನ ಖಾದಿ ಗ್ರಾಮೋದ್ಯೋಗದ ಹಿನ್ನೆಲೆ ಏನು?**

ಶತಮಾನಗಳಷ್ಟು ಹಳೆಯದಾದ ಈ ಖಾದಿ ಗ್ರಾಮೋದ್ಯೋಗ ಈಗಲೂ ತನ್ನ ಕಾರ್ಯ ಚಟುವಟಿಕೆ ನಡೆಸುತ್ತಿರುವುದು ವಿಶೇಷ. ಕನ್ನಡದ ಪ್ರಸಿದ್ಧ ಸಾಹಿತಿ ಜಿ.ಪಿ. ರಾಜರತ್ನಂ ಅವರು ಬದನವಾಳಿನ ಖಾದಿ ಬಟ್ಟೆಯನ್ನು ಬಳಸುತ್ತಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಮದುವೆಗಳಿಗೆ ಇಲ್ಲಿನ ಬಟ್ಟೆಯನ್ನೇ ಬಳಸುತ್ತಿದ್ದರು. ಖಾದಿಯ ಜೊತೆ ರೇಷ್ಮೆ ಉತ್ಪನ್ನಗಳ ತಯಾರಿಕೆ, ಬಳಿಕ ಕಾಗದ, ಎಣ್ಣೆಕಾಳು ಉತ್ಪಾದನೆ, ಚಕಮಕಿ ಬೆಂಕಿಕಡ್ಡಿ ತಯಾರಿಕೆಗೂ ಬದನವಾಳು ಹೆಸರುವಾಸಿಯಾಗಿತ್ತು. ಇಂದಿನ ಬಹುರಾಷ್ಟ್ರೀಯ ಕಂಪನಿಗಳ ಹಾವಳಿಯ ನಡುವೆ ಇನ್ನೂ ಜೀವಂತವಾಗಿರುವ ಇಲ್ಲಿನ ಖಾದಿ ಉದ್ಯಮದ ಸಾಧನೆ ಹೆಮ್ಮೆ ಎನಿಸುತ್ತದೆ. ■

# ನಾವು ಬಂದೇವ ಬದನವಾಳಿಗೆ



ಒಂದು ಕಾಲದಲ್ಲಿ ಸಾವಿರಾರು ಮಂದಿಗೆ ಕೆಲಸ ಕೊಟ್ಟ ಕೇಂದ್ರವಿದು. ಆದರೆ ಇಂದು? ಪ್ರಸನ್ನರ ಮಾತಿನಲ್ಲಿ ಹೇಳುವುದಾದರೆ, 'ಬದನವಾಳಿನ ಖಾದಿ ಹಾಗೂ ಗ್ರಾಮೋದ್ಯೋಗ ಕೇಂದ್ರ ಈಗ ಹರಪ್ಪ ಮೊಹೆಂಜೊದಾರೊ ಉತ್ಖನನದಂತೆ ಕಾಣುತ್ತದೆ. ಮುರಿದ ಕಟ್ಟಡಗಳು, ಜಾರುತ್ತಿರುವ ನಾಡ ಹಂಚುಗಳು, ಕುರುಚಲು ಪೊದೆ ಹಾಗೂ ಬಂಜರು ಭೂಮಿ. ಗಟ್ಟಿಯಿರುವ ಒಂದು ಶೆಡ್ಡಿನಲ್ಲಿ, ಹತ್ತಾರು ಮುದುಕಿಯರು ಖಾದಿ ನೂಲು ಸುತ್ತುತ್ತ ಕುಳಿತಿರುತ್ತಾರೆ. ಒಂದೆರಡು ಮಗ್ಗಗಳು ಲಟಾಪಟಾ ಸದ್ದು ಮಾಡುತ್ತಿರುತ್ತವೆ. ಎಣ್ಣೆಯ ಗಾಣ ಜಂಗು ತಿನ್ನುತ್ತಿದೆ, ಬಣ್ಣಗಾರಿಕೆಯ ತೊಟ್ಟಿ ಬಿರುಕು ಬಿಟ್ಟಿದೆ, ಪೇಪರ್ ಘಟಕ ಸ್ತಬ್ಧವಾಗಿದೆ, ಬೆಂಕಿಪೊಟ್ಟಣ, ಊದುಬತ್ತಿ ತಯಾರಿಕೆ ಎಲ್ಲವೂ ಸ್ತಬ್ಧವಾಗಿವೆ.'

ಬದನವಾಳು ಸತ್ಯಾಗ್ರಹ, ಬದನವಾಳನ್ನು ತನ್ನ ಸಂಕೇತದ ಕೇಂದ್ರವಾಗಿಸಿದೆ ಅಷ್ಟೇ. ವಾಸ್ತವವಾಗಿ ಪ್ರಸನ್ನರಿಗೆ ಇಂಥ ಸಂಕೇತಗಳಲ್ಲಿ ನಂಬಿಕೆಯಿಲ್ಲ. ವಾಸ್ತವವನ್ನು ಕಣ್ಣು ಬಿಟ್ಟು ನೋಡಿದರೆ, ಸಂಕೇತಗಳಿಗಿಂತ ಹೆಚ್ಚು ದಾರುಣವಾಗಿ ಕಾಣಿಸುತ್ತದೆ. ನಮ್ಮ ಅಭಿವೃದ್ಧಿಯ ವೇಗದ ಮುಂದೆ, ನಿಸರ್ಗಕ್ಕೂ ನಮಗೂ ಸಂಬಂಧವೇ ಇಲ್ಲದಂತಾಗಿದೆ. ರೈತರ ಮಕ್ಕಳೇ ಅನ್ನ ಉಣ್ಣುವವರಾಗಿ ಉಳಿದಿಲ್ಲ. ನೇಕಾರಿಕೆ ಪುನಶ್ಚೇತನಕ್ಕಾಗಿ ಪ್ರಸನ್ನ ಕಳೆದ ಕೆಲ ವರ್ಷಗಳಿಂದ ಹಗಲಿರುಳೂ ಹೋರಾಡುತ್ತಿದ್ದಾರೆ. ಅನೇಕ ಬಾರಿ ಅವರ ಕೂಗಿಗೆ ಸರಕಾರ ಕಿವಿಗೊಟ್ಟಂತೆ ನಟಿಸಿದೆ, ಇನ್ನನೇಕ ಬಾರಿ ದಿವ್ಯನಿರ್ಲಕ್ಷ್ಯ ತೋರಿಸಿದೆ. ಯಂತ್ರಗಳ ಮೇಲಿನ ಅತಿಯಾದ ಅವಲಂಬನೆ ಅಪಾಯಕಾರಿ. ಸುಸ್ಥಿರ ಬದುಕು ಬೇಕು ಎಂಬ ಅವರ ಮಾತು, ಅಭಿವೃದ್ಧಿ ವಿರೋಧಿಯಂತೆಯೂ ಹೆಚ್ಚಿನವರಿಗೆ ಕಾಣಿಸಿದೆ. ಆದಷ್ಟು ಕನಿಷ್ಟ ಸಂಪತ್ತಿನಿಂದ ಬದುಕುವುದು, ಶ್ರಮಸಹಿತ ಸರಳ ಜೀವನ ನಡೆಸುವುದು ಸುಸ್ಥಿರ ಬದುಕಿನ ತಿರುಳು. ಮುಂದಿನ ಜನಾಂಗದ ಕ್ಷೇಮ ಹಾಗೂ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ನಾವು ಇಂದಿನ ಸಂಪನ್ಮೂಲಗಳನ್ನು ಬಳಸಬೇಕು ಅನ್ನುವುದು ಅದರ ಸರಳ ವ್ಯಾಖ್ಯಾನ. ನಮ್ಮನ್ನಾಳುವವರಿಗೆ ಇಷ್ಟೂ ಅರ್ಥವಾಗುವುದಿಲ್ಲವೆಂದಲ್ಲ. ನಮ್ಮಲ್ಲಿನ್ನೂ ಬಹುತೇಕ ರೈತರು, ನೇಕಾರರು ಈ ರೀತಿಯಲ್ಲೇ ಬದುಕುತ್ತಿದ್ದಾರೆ. ಆದರೆ ಅಭಿವೃದ್ಧಿಯ ಹೆಸರಿನಲ್ಲಿ ಇವರನ್ನು ಆತಂಕಕ್ಕೆ ದೂಡುವ ಕೆಲಸವನ್ನು ಸರಕಾರಗಳೇ ಮಾಡುತ್ತಿವೆ.

ಈಗ ಅಖಿಲ ಭಾರತ ಕೈಮಗ್ಗ ಸಂಘಟನೆಗಳ ಒಕ್ಕೂಟ ಬದನವಾಳು ಸತ್ಯಾಗ್ರಹ ಹಾಗೂ ಸುಸ್ಥಿರ ಬದುಕಿನ ರಾಷ್ಟ್ರೀಯ ಸಮಾವೇಶಕ್ಕೆ ಕರೆ ನೀಡಿದೆ. ಮಾರ್ಚ್ 21ರಂದು ಆರಂಭಗೊಂಡಿರುವ ಸತ್ಯಾಗ್ರಹ, ಏಪ್ರಿಲ್ 19ರಂದು ಬದನವಾಳಿನಲ್ಲಿ ಬೃಹತ್ ರಾಷ್ಟ್ರೀಯ ಸಮಾವೇಶದಲ್ಲಿ ಸೇರಲಿದೆ. ಇದು ಯಾರ ವಿರುದ್ಧವೂ ಅಲ್ಲ, ಆಧುನಿಕ ಅಭಿವೃದ್ಧಿ ಉಮಟುಮಾಡುತ್ತಿರುವ ಆರ್ಥಿಕ, ಸಾಮಾಜಿಕ ದುಷ್ಪರಿಣಾಮಗಳ ಬಗ್ಗೆ ನಮ್ಮನಮ್ಮಲ್ಲೇ ಅರಿವು ಮೂಡಿಸಲಿಕ್ಕಿರುವುದು ಎಂದು ಅದರ ಪ್ರಣಾಳಿಕೆ ಹೇಳಿದೆ. ದನಕಾಯುವ ಹುಡುಗ ಹಾಗೂ ನೂಲು ಸುತ್ತುವ ಹುಡುಗಿ ಕೂಡ ಅಭಿವೃದ್ಧಿಯ ಹರಿಕಾರರೆಂದು ಮಾನ್ಯ ಮಾಡಬೇಕು. ಸಮಾನತೆ ಹಾಗೂ ಸಹಕಾರ ತತ್ವಗಳನ್ನು ಪೋಷಿಸುವ ಆರ್ಥಿಕತೆ ಮಾತ್ರವೇ ಅಭಿವೃದ್ಧಿಪರ ಆರ್ಥಿಕತೆ ಎಂದು ಮಾನ್ಯ ಮಾಡಬೇಕೆಂದು ಸತ್ಯಾಗ್ರಹ ಒತ್ತಾಯಿಸುತ್ತಿದೆ.

ನಿಜಕ್ಕೂ ಈ ಚಳವಳಿಯಿಂದ ನಮ್ಮನ್ನಾಳುವವರಿಗಲ್ಲ, ನಮಗೆ ಆತಂಕವಾಗಬೇಕು. ನಾವು ಸೃಷ್ಟಿಸಿಕೊಂಡ ಹುಸಿತನದ ಭವನಗಳನ್ನು ಕೆಡವಲು ಇದು ಮೂಲವಾಗಬೇಕು. ಎಲ್ಲ ನದಿಗಳೂ ಕಿರು ಒರತೆಯಿಂದಲೇ ಉಕ್ಕುತ್ತವೆ. ಬದನವಾಳು ಹೋರಾಟದ ನದಿಗೆ ಅಂಥ ಒರತೆಯಾಗಲಿ. ■